DOC-359
T.P-2

51st Year of Publication ★ SATYAVADI Daily, MYSORE 4

Reg No B G 155 23-8-1966

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ನ್ಯೆಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement

ಸ್ಥಾಪಕರು : ಶ್ರೀಮತಿ ಸರೋಜಿನಿ ಎಂ. ವಿ. ಶುಭ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಜೆಕೊಸ್ಲೊವಿಯಾದಲ್ಲಿ ಕೈಗೊಂಬೆ ಸರ್ಕಾರ

ಸತ್ಯವಾದಿ ”ಯ ಸ್ವರ್ಣೋತ್ಸವ

“ಸತ್ಯವಾದಿ” ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ ಶೆನ್ವೈ ರವರು, ಶ್ರೀ ಎಂ. ಬಿ. ಬಸವಯ್ಯನವರು, ಅ ನೆರಾ ಟಾಕೀಸಿನವರು, ಪದ್ಮಭೂಷಣ ನೇ ಶ್ರದಾನಿ ಡಾ॥ ಎಂ.ಸಿ ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವುನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇನೆ.

ಸಂಪಾದಕ ‘ಸತ್ಯವಾದಿ’
ಚಾಮರಾಜಪುರಂ, ಮೈಸೂರು 4.

ಟಿಬೆಟ್ ವಿಷಯದಲ್ಲಿ

ನವದೆಹಲಿ— ಟಿಬೆಟ್ ಬಗ್ಗೆ ವಿಶ್ವ ಸಂಸ್ಥೆಯಲ್ಲಿ ಭಾರತವು ತಾನೇ ಸೂಚನೆ ತರುವದಿಲ್ಲವೆಂದೂ, ಆದರೆ ಸಾರ್ವಭೌಮರಾದ ತಂದರೆ ಭಾರತವು ಜೊಂಬಲ ನೀಡುವುದೆಂದೂ ಪ್ರಧಾನಿಯವರು ಲೋಕಸಭೆಯಲ್ಲಿ ತಿಳಿಸಿದರು.

●

ಜೋಳ ವಶ

ಬಿಜಾಪುರ— ದಾವಣಗೆರೆ ಕಡೆಗೆ ಇದು ಲಾರಿಗಳಲ್ಲಿ ಅಕ್ರಮವಾಗಿ ಸಾಗಿಸಲಾಗುತ್ತಿದ್ದ 431 ಚೀಲ ಜೋಳವನ್ನು ಬೆಂಗಳೂರು ಸಿ ಐ ಡಿ ಯವರ ಸಹಾಯದಿಂದ ಬಿಜಾಪುರ ಪೋಲೀಸರು ವಶಪಡಿಸಿಕೊಂಡರು.

ಪತ್ರಿಕೆಗಳ ಲಾಕ್‌ಔಟ್

ನೌಕರರ ಅತಿಸ್ತುಕಾರ್ಯವತ್ತು ಮತ್ತು ಮುಷ್ಕರದಿಂದ ಬೊಂಬಾಯಿನ ಟೈಮ್ಸ್ ಆಫ್ ಇಂಡಿಯಾ ಮತ್ತು ಫ್ರೀ ಪ್ರೆಸ್ ಜರ್ನಲ್ ಮತ್ತು ಮಹ್ರಾಸಿನ ಹಿಂದೂ ಪತ್ರಿಕೆಗಳು ಲಾಕ್‌ಔಟ್ ಮಾಡಿವೆ

★

ಎಂತಹ ಹೀನ ಕೆಲಸ

ನವದೆಹಲಿ— ಉತ್ತರ ಪ್ರದೇಶದ ಗೊಂಡಾದಲ್ಲಿ ಪೋಲೀಸರ ಈಚಿನ ದುರ್ವರ್ತನೆ ಬಗ್ಗೆ ಸ್ವತಂತ್ರ ವಿಚಾರಣೆ ನಡೆಯಬೇಕೆಂದು ರಾಜ್ಯಸಭೆಯಲ್ಲಿ ಸದಸ್ಯರು ಕೇಳಿಕೆ ಹಾಕಿದರು – ಒಬ್ಬ ಬಡ ಹೆಣ್ಣಿಗೆಸಗಿನ್ನು ಅವಮಾನಿಸಿ, ಮಾನಭಂಗಮಾಡಿ, ಬೆತ್ತಲೆಯಾಗಿ ಬೀದಿಯಲ್ಲಿ ಮೆರವಣಿಗೆ ಮಾಡಲಾಯಿತೆಂದು ಆಪಾದಿಸಲಾಯಿತು.

★

ಸಂಬಳ

ಜಯಪುರ— ಪೇ ಕಮಿಷನ್ನಿನ ಶಿಫಾರಸ್ಸುಗಳನ್ನು ಹೆಲವು ಬದಲಾವಣೆಯೊಡನೆ ರಾಜಸ್ಥಾನ ಸರಕಾರ ಒಪ್ಪಿದೆ – ಹುಟ್ಟಿ ಭತ್ಯೆ ಸೇರಿ ರೂ. 125 ಕನಿಷ್ಠ ವೇತನ ವಿರಬೇಕೆಂಬುದನ್ನು ಸರಕಾರ ಒಪ್ಪಿದೆ.

★

ಫೇರಾವೋ

ತ್ರಿವೇಂದ್ರಂ— ಅಕೌಂಟೆಂಟ್ ಜನರಲ್‌ನನ್ನು ಫೇರಾವೋಮಾಡಿದ ಕಚೇರಿಯ ಮುನ್ನೂರು ನೌಕರರು ಬಂಧಿಸಲ್ಪಟ್ಟರು,

ಏರ್ಪಾಟಿನ ಪ್ರಶಂಸೆ

ಮೈಸೂರು— ಪೋಲೀಸು ಸೂಪರಿಂಟೆಂಡೆಂಟ್ ರೊಡನೆ ಆಹಾರ ಮಂತ್ರಿ ಶ್ರೀ ವಿಠಲತಾಸ ಶಟ್ಟರು ಹೆಗ್ಗಡದೇವನಕೋಟೆ ತಾಲ್ಲೂಕು ಚೆಕ್‌ಪೋಸ್ಟಿಗೆ ಭೇಟಿ ಕೊಟ್ಟು, ಕೇರಳಕ್ಕೆ ಅಕ್ರಮ ಅಕ್ಕಿ ಸಾಗಾಣಿಕೆ ನಿರ್ಬಂಧದ ಏರ್ಪಾಡನ್ನು ಪ್ರಶಂಸಿಸಿದರು.

★

ಸಸ್ಪೆಂಡ್

ಬೆಂಗಳೂರು— ತಿರುಚಿ ಡಿವಿಜನಲ್ ಕಮರ್ಷಿಯಲ್ ಸೂಪರಿಂಟೆಂಡೆಂಟ್ ಶ್ರೀ ನಂಜುಂಡಯ್ಯ ಮತ್ತು ಓಲರಕೋಟೆ ವಿಜನಲ್ ಸೂಪರಿಂಟೆಂಡೆಂಟ್ ಶ್ರೀ ಶಾನನಾಥಂರವರನ್ನು ಭ್ರಷ್ಟಾಚಾರಕ್ಕಾಗಿ ಸಸ್ಪೆಂಡು ಮಾಡಲಾಗಿದೆ.

★

ಉದ್ಘಾಟನೆ

ಉಡುಪಿ ಶ್ರೀ ಪೇಜಾವರ ಮಠದವರು ಸ್ಥಾಪಿಸಿರುವ ಶ್ರೀ ಕೃಷ್ಣ ಉಚಿತ ಆಸ್ಪತ್ರೆಯನ್ನು ಶ್ರೀ ಭಂಡಾರಕೇರಿ ಮಠದ ಸ್ವಾಮಿಗಳವರು ಉದ್ಘಾಟಿಸಿದರು.

★

ವಿದೇಶ ಪ್ರವಾಸ

ಬೆಂಗಳೂರು— ಕೊಳದ ವೀರದ ಶ್ರೀ ಪ್ರಣವಸ್ವರೂಪಿ ಶಾಂತವೀರ ಸ್ವಾಮಿಗಳವರು ಅಮೇರಿಕಾ ಮತ್ತು ಜಪಾನಿಗೆ ಭೇಟಿ ಕೊಡಲು ಯೋಜಿಸಿರುವರು.

★

ಕಷ್ಟ ಪರಿಸ್ಥಿತಿ

ಸಾಗರ— ಶರಾವತಿ ಪ್ರಾಜೆಕ್ಟಿನ ಲಿಂಗನಮಕ್ಕಿ ಅಣೆಕಟ್ಟಿನ ನೀರು ಏರುತ್ತಿದ್ದು ಮುಳುಗಡೆ ಪ್ಲಾನಿನಲ್ಲಿ ಕಾಣಿಸಲ್ಪಡದಿರುವ ಅನೇಕ ಗ್ರಾಮಗಳಲ್ಲಿ ಕಳವಳ ಉಂಟಾಗಿದೆ.

ಕೈಗೊಂಬೆ ಸರಕಾರ

ಪ್ಯಾಕ್— ಜೆಕೊಸ್ಲೋಯಾದಲ್ಲಿ ಜನರು ಶಾಂತಿಯುತ ಪ್ರತಿಭಟನೆ ಆಚರಿಸಿರುವುದರಿಂದ ರಷ್ಯಾದ ಆಕ್ರಮಿತ ಪಡೆಗಳು ಅಲ್ಲಿ ತನ್ನ ಆಡಳಿತದ ಕೈಗೊಂಬೆ ಸರಕಾರ ಸ್ಥಾಪಿಸಲಿರುವವೆಂದು ವರದಿಯಾಗಿದೆ – ದೇಶದಲ್ಲಿ ಮಾರ್ಷಲ್ ಲಾ ಜಾರಿಯಾಗಿದೆ

ವಿಶ್ವಸಂಸ್ಥೆಯಲ್ಲಿ

ವಿಶ್ವಸಂಸ್ಥೆ— ನಿಸ್ಸೈ ರಕ್ಷಣಾ ಸಮಿತಿಯಲ್ಲಿ ಅಮೇರಿಕಾ, ಬ್ರಿಟನ್, ಫ್ರಾನ್ಸ್ ಮತ್ತಿತರ ನಾಲ್ಕು ದೇಶಗಳು, ತಂದ ನಿರ್ಣಯದಲ್ಲಿ ಜೆಕೊಸ್ಲೊವಿಯಾ ಮೇಲೆ ಶಸ್ತ್ರ ಧಾಳಿ ಮಾಡಿ ಆಕ್ರಮಿಸಿದ ರಷ್ಯಾ ಮತ್ತದರ ವಾರ್ಸಾ ಒಪ್ಪಂದದ ಮಿತ್ರರ ಕಾರ್ಯವನ್ನು ಖಂಡಿಸಿ, ಅವು ಅಲ್ಲಿಂದ ಕೂಡಲೇ ವಾಪಸ್ಸಾಗಬೇಕೆಂಬ ಸೂಚನೆ ಇತ್ತು.

★

ಮೌನ ಮೆರವಣಿಗೆ

ಜೆಕ್ ಪ್ರದೇಶವನ್ನು ಆಕ್ರಮಣ ಮಾಡಿರುವ ರಷ್ಯಾ ನೀತಿ ಪ್ರತಿಭಟಿಸಲು ಸಾಲ್ಟ್ ಲೇಕ್ ಸಿಟಿಯ ವಿರೋಧ ಪಕ್ಷದವರು ದೆಹಲಿಯಲ್ಲಿರುವ ರಷ್ಯಾ ರಾಯಭಾರಿ ಕಛೇರಿ ಎದುರು ನಿನ್ನೆ ಮೌನ ಪ್ರದರ್ಶನ ಮಾಡಿದರು.

●

ಅಶೋಕ ಮೆಹತಾ ರಾಜೀನಾಮೆ

ಜೆಕೊಸ್ಲವಾಕಿಯಾ ಬಗ್ಗೆ ಭಾರತದ ನಿಲುವಿನ ಕುರಿತು ಪ್ರತ್ಯೇಕ ನಿಲುವನ್ನು ಹೊಂದಿ, ಯೋಜನಾ ಮಂತ್ರಿ ಶ್ರೀ ಅಶೋಕ ಮೆಹತಾರು ರಾಜೀನಾಮೆ ನೀಡಿದುದನ್ನು ರಾಷ್ಟ್ರಪತಿಯವರು ಅಂಗೀಕರಿಸಿದರು.

★

ದೊಡ್ಡ ರೋಗ-ಪ್ರದೇಶ

ಮೈಸೂರು ಪೌರಸಭೆ ಪ್ರದೇಶವನ್ನು ಜನಗಳ ದೊಡ್ಡ ರೋಗ ಪ್ರದೇಶವೆಂದು ಸರಕಾರ ಘೋಷಿಸಿದೆ.

ಹಿಂದೂಗಳ ಆಚಾರ

ಸಂಗ್ರಾಹಕರು— 'ಶಾಸ್ತ್ರಧರ್ಮನಿರತ" ಆನಂತನರಸಿಂಹಯ್ಯಂಗಾರ್

(ಮುಂದುವರಿದುದು)

ವರ್ಣಗಳಲ್ಲಿ ಬ್ರಾಹ್ಮಣ ವರ್ಣವೂ, ಆಶ್ರಮಗಳಲ್ಲಿ ಸನ್ಯಾಸಾಶ್ರಮವೂ ಸಮಾಜದ ಧಾರ್ಮಿಕ ಉನ್ನತಿಗಾಗಿಯೇ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟಿದೆ. ಧನ, ಅಧಿಕಾರ, ಶಾರೀರಕ ಸುಖ, ಇವೆಲ್ಲಾ ಇವರಿಗೆ ತ್ಯಾಜ್ಯ ಪರಮಾತ್ಮನ ಚಿಂತನೆ, ಸಮಾಜದ ಇತರ ಬಾಂಧವರಿಗೆ ಪರಮಾತ್ಮನ ಇರುವಿಕೆಯನ್ನು ಸ್ಪಷ್ಟಪಡಿಸುವುದು, ದೇಶಕ್ಕೆ ಅನಾವೃಷ್ಟಿ, ದೌರ್ಭಿಕ್ಷ ಮುಂತಾದ ಕ್ಲೇಶಗಳುಂಟಾಗದಂತೆ ಸದಾಕಾಲವೂ ಶಾಸ್ತ್ರವಿಹಿತವಾದ ಯಜ್ಞಗಳನ್ನು ನಡೆಸಬೇಕಾದುದು ಇವರ ಮುಖ್ಯ ಕರ್ತವ್ಯವಾಗಿರುತ್ತೆ:

ಜೀವಸೋಪಾಯಕ್ಕೆ ಸ್ವಲ್ಪ ತೊಂದರೆ ಒದಗಿದ ಒಡನೆಯೇ ಶಾಸ್ತ್ರ ಮಾರ್ಗವನ್ನು ಬಿಡುವುದು ಸರಿಯಲ್ಲ. ಅದರಿಂದ ಪರಮಾತ್ಮನ ಆಗ್ರಹಕ್ಕೂ ಲೋಕನಿಂದೆಗೂ ಒಳಗಾಗಬೇಕಾಗುತ್ತದೆ. ಧರ್ಮಪೀಠಾಧಿಪತಿಗಳೇ ಶಾಸ್ತ್ರಗಳನ್ನು ಉಲ್ಲಂಘನೆ ಮಾಡುವುದರಿಂದ ಸಾಮಾನ್ಯ ಜನರು ಬೇಗ ಶಾಸ್ತ್ರಗಳಲ್ಲಿ ನಂಬಿಕೆ ಕಳೆದುಕೊಳ್ಳುತ್ತಾರೆ. ಆದುದರಿಂದ ಸಮಾಜದ ಶ್ರೇಯಸ್ಸನ್ನು ಬಯಸುವ ಮಠಾಧೀಶರೂ, ಆಚಾರ್ಯ ಪುರುಷರೂ ಸಮಾಜಕ್ಕೆ ತ್ಯಾಗದ ಪಾಠವನ್ನು ಮಾಡಿ ತೋರಿಸಬೇಕಾಗಿದೆ. ಸರ್ವಸ್ವವನ್ನೂ ತ್ಯಾಗಮಾಡಿರುವ ಸನ್ಯಾಸಿಯು ಧರ್ಮವಿರೋಧಿಯಾದ ಸರಕಾರಕ್ಕಾಗಲಿ ಹಣವಂತರಿಗಾಗಲಿ ಹೆದರಬೇಕಾಗಿಲ್ಲ ಎಂಬ ಉಚ್ಚ ಭಾವನೆ ಹೊಂದುವಂತಾದಾಗ ಸಮಾಜಕ್ಕೆ ಒಳ್ಳೆಯ ಮಾರ್ಗದರ್ಶನ ದೊರಕಬಹುದೆಂದು ನಂಬಿರುತ್ತೇವೆ.

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H. H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav henoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Quality Printing — Neat Binding

Lakshminarasimha Press

Sivarampet, Mysore

ಅಶೋಕ ಏಜೆನ್ಸೀಸ್

ಲೈನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳಿಗಾಗಿ ದೊರೆಯುತ್ತವೆ

ವುಡ್‌ಲಾಂಡ್ಸ್ ಜನವರಿ 3 ನೇ ವಾರ

— ಮನಮೋಹಕ ಹಿಂದಿ ಚಿತ್ರ —

ಫಜ್ರ್

ಈಸ್ಟ್‌ಮನ್ ಕಲರ್

ಪಾತ್ರ — ಜಿತೇಂದ್ರ, ಬಬಿತಾ, ಕಾಂಚನಾ, ಮುಕ್ರಿ, ಆಗಾ ಮುಂತಾದವರು

ಸಂಗೀತ — ಲಕ್ಷ್ಮೀಕಾಂತ್ ಪ್ಯಾರೇಲಾಲ್

ಆಪೇರ— ದಿಗ್ವಿಜಯ 8 ನೇ ವಾರ

ಚಿತ್ರಾಕರ್ಷ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವತ್ಥ್ ಬಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ ಪ್ರಚಾರದಲ್ಲಿ, ಕಾಲಾಹಾರಿ, ಪಶುವೈದ್ಯ, ವಿಚಾರಗಳ ವೈಜ್ಞಾನಿಕ ಪ್ರಚಾರ ಮಾಸಪತ್ರಿಕೆ : ವಾರ್ಷಿಕ ಚಂದಾ 50 ನೈ ಪೈ

— ಗೋರಕ್ಷಣಾ ವ್ಯವಸ್ಥಾದರ್ಶಿಗಳು ವಿನಂತಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ ದಯವಿಟ್ಟು ಮುಂಚಿತವಾಗಿ ಸ್ವೀಕರಿಸಲಾಗುವುದು

ಚಂದಾದಾಯಿದೆ ಕಳಿದಿರುವವರು ಇವರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂ

ಡಾ|| ಪಿ ಎಸ್. ನಾರಾಯಣ್, ಶ್ರೀ ಪಿ.ಎಸ್ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು

ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರನಿರತ, ಹೊಸಲಿಂಗನಹಳ್ಳಿ

ಗೋರಕ್ಷಣಾ ಆಫೀಸು, ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ— ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ಮುಖ್ಯ ಸಾಧನೆದಯಾ ಕಾರುಣ್ಯಗಳು ಹೆಚ್ಚಲಿ ನಡೆಯಲಿ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4